ತರಗತಿಯಿಂದಲೆ ತನ್ನ ಡವನ್ನು ಕಲಿಸಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆ ನಿರ್ಣಯಿಸುತ್ತದೆ. ಈ ಭಾಷಾ ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಸಹಾಯಕವಾಗುವಂತೆ ಸರ್ಕಾರವು ಒಂದು ಸೂಕ್ತ ಉನ್ನತ ಸಮಿತಿಯನ್ನು ನೇಮಿಸತಕ್ಕದ್ದೆಂದು ನಿರ್ಣಯಿಸುತ್ತದೆ.

(ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು)

Statement by the Chief Minister

Re. Restoration of Powercut to H.T. Consumers.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಮಾಡುತ್ತಾರೆ.

ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ

ಶರಾವತಿ ಜಲಾಶಯದ ನೀರಿನ ಮಟ್ಟವನ್ನು ಮತ್ತು ವಿದ್ಯುತ್ ಬಳಕೆಯ ಎಲ್ಲಾ ಕ್ಷೇತ್ರಗಳ ಬೇಡಿಕೆಯನ್ನು ಪರಿಗಣಿಸಿ, ಸರ್ಕಾರ ರಾಜ್ಯದಲ್ಲಿ ೭-೧-೧೯೮೨ ರಿಂದ ಹೈಟೆನ್‌ಷನ್ ಬಳಕೆದಾರರ ಮೇಲೆ ವಿದ್ಯುತ್ ಕಡಿತವನ್ನು ವಿಧಿಸಿತು.

ಇತ್ತೀಚೆಗೆ ವಿದ್ಯುತ್ ಪೂರೈಕೆಯ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿದೆ. ಕಾಳಿ ನದಿಯಲ್ಲಿ ಸರಾಸರಿ ೭,೦೦೦ ಕ್ಯೂಸೆಕ್ಸ್ ನೀರಿನ ಪ್ರವಾಹವನ್ನು ನಿರೀಕ್ಷಣೆ ಮತ್ತು ಕಾಳಿ ಯೋಜನೆಯ ನಾಗರಝರಿ ವಿದ್ಯುತ್ ಗಾರದಲ್ಲಿ ನಾಲ್ಕು ಘಟಕಗಳು ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುವುದರಿಂದ ಈಗ ವಿಧಿಸ ಲಾಗಿರುವ ವಿದ್ಯುತ್ ಬಳಕೆಯ ಮೇಲಿನ ಕಡತವನ್ನು ಮುಂದುವರಿಸಬೇಕಾಗಿಲ್ಲವೆಂದು ಕಂಡು ಬಂದಿದೆ. ಆದ್ದರಿಂದ ೭-೧-೧೯೮೨ ರಿಂದ ಇಂದಿನವರೆಗೆ ವಿಧಿಸಲಾಗಿದ್ದ ಹೈಟೆನ್‌ಷನ್ ಬಳಕೆದಾರರ ಮೇಲಿನ ವಿದ್ಯುತ್ ಕಡಿತವನ್ನು ಕೂಡಲೇ ಹಿಂತೆಗೆದುಕೊಳ್ಳಲು ಸರ್ಕಾರ ತೀರ್ಮಾನಿಸಿದೆ. ಈ ಸ್ಥಿತಿ ೧೯೮೨ ಸೆಪ್ಟೆಂಬರ್ ಕೊನೆಯವರೆಗೆ ಮುಂದುವರಿಯುವುದು ಮತ್ತು ಆಗ ಪರಿಸ್ಥಿತಿಯನ್ನು ಅವಲೋಕಿಸಿ ಅವಶ್ಯವಿದ್ದಲ್ಲಿ ಪುನಃ ಪರಿಶೀಲಿಸಲಾಗುವುದು.

ಆದರೆ ಬೆಂಗಳೂರಿನ ಪೀಣ್ಯಾದಲ್ಲಿರುವ ಒಂದು ಟ್ರಾನ್ಸ್ ಫಾರ್ಮರ್ ಸಧ್ಯಕ್ಕೆ ಕೆಟ್ಟಿರುವುದರಿಂದ (ಅಂಡರ್ ರಿಪೇರ್) ೬೬ ಕಿಲೋ ವಾಟ್ ಪ್ರಧಾನ ರಿಂಗ್ ಲೈನ್ ಮೂಲಕ ಬೆಂಗಳೂರಿನಲ್ಲಿರು ಹೈಟೆನ್‌ಷನ್ ಬಳಕೆದಾರರಿಗೆ ಮಾತ್ರ ವಿದ್ಯುತ್‌ಚ್ಛಕ್ತಿಯ ಬಳಕೆಯ ಮೇಲೆ ಶೇಕಡ ೨೦ರ ವರೆಗೆ ಕಡಿತ ವನ್ನು (ಡಿಮ್ಯಾಂಡ್ ಕಟ್) ವಿಧಿಸಲಾಗುವುದು.

ಅಧ್ಯಕ್ಷರು.—ಇವೊತ್ತಿನ ಸಭೆಯ ಕಾರ್ಯಕಲಾಪಗಳನ್ನು ಮುಗಿಸಿ ಸಭೆಯು ನಾಳೆ ಒಂದು ಗಂಟೆಗೆ ಮುಂದೂಡಲ್ಪಟ್ಟಿದೆ. ಸಭೆಯು ಪುನಃ ನಾಳೆ ಒಂದು ಗಂಟೆಗೆ ಸೇರುತ್ತದೆ.

ಸಭೆಯು ಎಳು ಗಂಟೆ ಮುವತ್ತೈದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೨೫ನೇ ಶುಕ್ರವಾರ ಜೂನ್ ೧೯೮೨ ರಂದು ಮಧ್ಯಾಹ್ನ ಒಂದು ಗಂಟೆಗೆ ಸೇರಲು ನಿಶ್ಚಯಿಸಿತು.